## 1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ಸಂಖ್ಯೆ: 1251-2021**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಕುಂದಾಪುರ ಸಂಚಾರಿ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿ ಃ ವಿಜಯ ಕುಮಾರ

**<u>ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2. ಪ್ರಾಸಾ 3: ಚಂದ್ರಶೇಖರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಕೋಟೇಶ್ವರದ ಪ್ರೀತಂ ಬಾರ್ ಎದುರು 19 ನೇ ತಾರೀಕು 2021ರಂದು ರಾತ್ರಿ 9-30ರ ಸಮಯದಲ್ಲಿ ಅಂಗಡಿಯನ್ನು ಮುಚ್ಚಿ ತಾನು ಹೊರಗೆ ನಿಂತಿದ್ದಾಗ ಎ. ಪಿ. ಎಂ ಬಸ್ಸು ಅತೀ ವೇಗವಾಗಿ ತಪ್ಪು ಮಾರ್ಗದಲ್ಲಿ ಬಂದು ಬೈಕಿಗೆ ಡಿಕ್ಕಿಪಡಿಸಿದ್ದು. ಇದರಿಂದ ಬೈಕು ಜಖಂಗೊಂಡು ಅದರ ಸವಾರ ಸ್ಥಳದಲ್ಲಿ ಮೃತಪಟ್ಟಿದ್ದು. ಸದ್ರಿ ಬಸ್ಸಿನ ಚಾಲಕ ದಿನೇಶ್ ಪೂಜಾರಿಯಾಗಿರುತ್ತಾರೆ. ಸದ್ರಿ ಸ್ಥಳದಲ್ಲಿ ಪಂಚನಾಮೆ ಜರುಗಿಸುವ ವೇಳೆಗೆ ತಾನು ಹಾಜರು ಇದ್ದು, ಚಾಸಾ-7ರವರು ಇದ್ದು, ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 4-30 ರಿಂದ 5.00 ಗಂಟೆ ಸಮಯದಲ್ಲಿ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದು ತನ್ನ ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 3. ಪ್ರಾಸಾ 3: ಚಂದ್ರಶೇಖರ ರವರು ಮುಂದುವರೆದು ಅಪಘಾತಕ್ಕೆ ಒಳಗಾದ ಬೈಕು ಠಾಣೆಯಲ್ಲಿ ಇದ್ದು, ಮರುದಿನ ಅದನ್ನು ವಶಕ್ಕೆ ಪಡೆಯುವ ವೇಳೆಗೆ ತಾವು 3 ಜನರು ಹಾಜರು ಇದ್ದು. ಆಗ ತನ್ನ ಸಹಿ ಪಡೆದಿದ್ದು. ಅದೇ ದಿನ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸ್ಥಳ ಪಂಚನಾಮೆ, ನಕ್ಷೆ, ಸ್ವತ್ತು ಸ್ವಾಧೀನತಾ ಪಂಚನಾಮೆ ಹಾಗೂ 4 ಪೋಟೋಗಳನ್ನು ನಿಪಿ-3 ರಿಂದ 9 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 4. ಪ್ರಾಸಾ 4: ಮೋಹನ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-3 ರಿಂದ 5 ರಲ್ಲಿ ತನ್ನ ಸಹಿಗಳನ್ನು ನಿಪಿ-3(ಬಿ) ರಿಂದ ನಿಪಿ-5(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ದಿಃ 19-02-2021 ರಂದು ಪ್ರೀತಂ ಬಾರ್ ಬಳಿ ಪಂಚನಾಮೆ ಜರುಗಿಸುವ ವೇಳೆಗೆ ತಾನು ಮತ್ತು ಚಾಸಾ-3 ರವರು ಹಾಜರು ಇದ್ದು, ಸದ್ರಿ ಕ್ರಮವನ್ನು ಸಂಜೆ 4-30 ರಿಂದ 5-30 ರವರೆಗೆ ಜರುಗಿಸಿ ತನ್ನ ಸಹಿ ಪಡೆದಿದ್ದು. ಸ್ಥಳದಲ್ಲಿ ರಕ್ತದ ಕಲೆ ಮತ್ತು ಹೆಲ್ಮೆಟ್ ಇತ್ತು. ಬೈಕನ್ನು ಠಾಣೆಯ ಬಳಿ ವಶಕ್ಕೆ ಪಡೆಯುವ ವೇಳೆಗೆ ಮತ್ತೊಂದು ಸಹಿಯನ್ನು ಮಾಡಿದ್ದು. ನಿಪಿ-6 ರಿಂದ 9ನ್ನು ನೋಡಿ ಗುರುತಿಸಿರುತ್ತಾರೆ. ದಿಃ 18.02.2021 ರಂದು ರಾತ್ರಿ 9-30 ಗಂಟೆಗೆ ಪ್ರೀತಂ ಬಾರ್ ಬಳಿ ಅಪಘಾತವಾಗಿರುವುದಾಗಿ ಕರೆ ಬಂದಿದ್ದು. ತಾನು ಸ್ಥಳಕ್ಕೆ ತಲುಪುವ ವೇಳೆಗೆ ಮೃತರ ದೇಹವನ್ನು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಸ್ಥಳಾಂತರಿಸಿದ್ದು, ಬಸ್ಸು ಡಿಕ್ಕಿ ಪಡಿಸಿದ ಪರಿಣಾಮ ತನ್ನ ಅಣ್ಣ ಪ್ರವೀಣ್ ಮೃತಪಟ್ಟಿರುತ್ತಾರೆ ಎಂದು ತಿಳಿದು ಬಂದಿದ್ದು. ತಾನು ಸ್ಥಳಕ್ಕೆ ಹೋದಾಗ ಬಸ್ಸು ಹಾಗೂ ಬೈಕು ಸ್ಥಳದಲ್ಲಿ ಇತ್ತು. ಈ ಕುರಿತಾಗಿ ಪೊಲೀಸರು ತನ್ನ ಹೇಳಿಕೆ ಪಡೆದಿದ್ದು. ಸದ್ರಿ ದಿನ ಬಸ್ಸಿನ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 5. ಪ್ರಾಸಾ 6: ಶ್ರೀಮತಿ ಪ್ರಮೋದಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 18-02-2021 ರಂದು ತನ್ನ ಗಂಡನಿಗೆ ಕೋಟೇಶ್ವರದ ಪ್ರೀತಂ ಬಾರ್ ಬಳಿ ಅಪಘಾತವಾಗಿದ್ದು, ಎ.ಪಿ.ಎಂ ಬಸ್ಸು ಡಿಕ್ಕಿಪಡಿಸಿರುವುದಾಗಿ ಆತನ ಸ್ನೇಹಿತ ಕರೆ ಮಾಡಿ ನನಗೆ ತಿಳಿಸಿದ್ದು. ಬಸ್ಸು ಚಾಲಕನ ತಪ್ಪಿ ನಿಂದ ಅಪಘಾತವಾಯಿತು ಎಂದು ತಿಳಿದು ಬಂದಿದ್ದು. ಆ ದಿನ ತನ್ನ ಗಂಡ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿದ್ದು. ಆತ ಅಪಘಾತದಿಂದ ಮೃತಪಟ್ಟಿದ್ದು ನಾನು ಆಸ್ಪತ್ರೆಯಲ್ಲಿ ನೋಡಿದ್ದು. ಈ

ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದು. ಸಾಕ್ಷಿ ನಿಪಿ-9ರ ದ್ವಿ ಚಕ್ರ ವಾಹನದ ಫೋಟೋವನ್ನು ನೋಡಿ ಗುರುತಿಸಿದ್ದು. ಸಾಕ್ಷಿ ಇಂಡಿಮಿನಿಟಿ ಬಾಂಡನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 6. ಪ್ರಾಸಾ 9: ಸುದರ್ಶನ ಬಿ.ಎನ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 18-02-2021 ರಂದು ರಾತ್ರಿ 11-25 ಗಂಟೆಗೆ ತಾನು ಠಾಣೆಯಲ್ಲಿ ಇರುವಾಗ ಚಾಸಾ-1ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಅಪರಾಧ ಸಂಖ್ಯೆ 30/2021 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿ ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿದ್ದು. ನಂತರ ಕಡತವನ್ನು ಚಾಸಾ-18 ರವರಿಗೆ ಹಸ್ತಾಂತರಿಸಿರುತ್ತೇನೆ. ನಿಪಿ-1 ರಲ್ಲಿ ತನ್ನ ಸಹಿಯನ್ನು ನಿಪಿ-1(ಬಿ) ಎಂದು, ಪ್ರ.ವ.ವರದಿಯನ್ನು ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 7. ಪ್ರಾಸಾ 10: ವಿಶ್ವನಾಥ ನಾಯ್ಕ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 20-02-2021 ರಂದು ಕುಂದಾಪುರ ವೃತ್ತ ನಿರೀಕ್ಷಕರ ಕೋರಿಕೆ ಮೇರೆಗೆ ಅದೇ ದಿನ ಸಂಜೆ 4-30 ಗಂಟೆ ಸಮಯದಲ್ಲಿ ಕುಂದಾಪುರ ಸಂಚಾರಿ ಆರಕ್ಷಕ ಠಾಣೆಯಲ್ಲಿ ನಿಲ್ಲಿಸಿದ ಅಪಘಾತಕ್ಕೆ ಒಳಪಟ್ಟ ಕೆಎ-20-ಡಿ-7017 ಬಸ್ಸು ನ್ನು ಪರೀಕ್ಷಿಸಿದ್ದು, ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ. 1. ಮುಂಭಾಗದ ಬಂಪರ್ ನ ಬಲಬದಿ, ರೇಡಿಂಹೋಟರ್ ಗ್ರಿಲ್ ನ ಬಲ ಬದಿ, ರೇಡಿಯೇಟರ್ ನ ಬಲ ಬದಿ, ಮುಂಭಾಗದ ಬಲಬದಿಯ ಫಾಗ್ ಲ್ಯಾಂಪ್ ಮತ್ತು ಪ್ರಥಮ ಕ್ರಾಸ್ ಮೆಂಬರ್ ನ ಬಲಭಾಗ ಜಖಂಗೊಂಡಿರುತ್ತದೆ. ಉಳಿದ ಭಾಗಗಳು ಸುಸ್ಥಿತಿಯಲ್ಲಿ ಇದ್ದವು. 2ನೇ ವಾಹನ ಸಂಖ್ಯೆ ಕೆಎ-20-ಇಬಿ-9759 ದ್ವಿ ಚಕ್ರವಾಹನವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 8. ಪ್ರಾಸಾ 10: ವಿಶ್ವನಾಥ ನಾಯ್ಕ ರವರು ಮುಂದುವರೆದು 1. ಮುಂಭಾಗದ ಶೋ ಸಂಪೂರ್ಣ ಜಖಂ ಗೊಂಡಿದ್ದು. ಮುಂಂಭಾಗದ ಮಡ್ ಗಾರ್ಡು, ಹೆಡ್ ಲೈಟ್ ಯುನಿಟ್, ಮುಂಭಾಗದ ಚಕ್ರ, ಚಾಸೀಯಾ ಮುಂಭಾಗ, ಮುಂಭಾಗದ ಪೋರ್ತ್, ಡಯಲ್ ಗೇಜ್, ಬ್ರೇಕ್ ಪೆಡೆಲ್, ಗೇರ್ ಲಿವರ್, ಕ್ಲಚ್ ಲಿವರ್, ಸ್ಟೇಮ್, ಬಲಭಾಗದ ಹಿನ್ನೋಟ ಕನ್ನಡಿ, ಮುಂಭಾಗದ 2 ಬದಿಯ ಇಂಡಿಕೇಟರ್ ಗಳು, ಕ್ರ್ಯಾ ಷ್ ಗಾರ್ಡ್, ಎಡಭಾಗದ ಎರಡೂ ಪೂಟ್ ರೆಸ್ಟ್ ಗಳು, ಮುಂಭಾಗದ ಮತ್ತು ಹಿಂಭಾಗದ ನೋಂದಣಿ ಸಂಖ್ಯೆ ಫಲಕಗಳು, ಹಿಂಭಾಗದ ಎರಡೂ ಬದಿಯ ಇಂಡಿಕೇಟರುಗಳು, ಹಿಂಭಾಗದ ಚಕ್ರದ ಡಿಸ್ಕ್ ಗಳು ಜಖಂಗೊಂಡಿದ್ದು. ಎಡಬದಿಯ ಹಿನ್ನೋಟ ಕನ್ನಡಿ ವಾಹನದಲ್ಲಿ ಕಂಡು ಬಂದಿರಲಿಲ್ಲ. ಇತರೆ ಭಾಗಗಳು ಸುಸ್ಥಿತಿಯಲ್ಲಿ ಇದ್ದವು. ಎರಡೂ ವಾಹನಗಳ ತಡೆಯು ಸುಸ್ಥಿತಿಯಲ್ಲಿ ಇತ್ತು. ತನ್ನ ಅಭಿಪ್ರಾಯದ ಪ್ರಕಾರ ಸದ್ರಿ ಅಪಘಾತವು ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಸದ್ರಿ ವರದಿಯನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8 ಮತ್ತು 9 ರಲ್ಲಿ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 9. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 10: ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ದಿನಾಂಕ 25.02.2026

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.